## ಪಾಠ 10

## ಸಭೆ:

# ಆದರ ಐಕ್ಯತೆ

**ಐಕ್ಯತೆಯು ನಿರೂಪಿಸಲ್ಪಟ್ಟದ್ದು**

1. **ಪೌಲನು ಕೊರಿಂಥದವರಿಗೆ ಕೇಳಿದ ನಾಲ್ಕು ಸಂಗತಿಗಳನ್ನು ಹೇಳಿರಿ (1 ಕೊರಿಂಥ 1:10).**
   ಹಾಗಾದರೆ ಯಾವುದರಲ್ಲಿ ಐಕ್ಯತೆಯು ಒಳಗೊಂಡಿರುತ್ತದೆ?
2. **ಐಕ್ಯತೆಯ ಆಶೀರ್ವಾದದ ಬಗ್ಗೆ ದಾವೀದನು ಏನು ಹೇಳಿದನು (ಕೀರ್ತನೆ 133:1)?**
3. **"ಐಕ್ಯತೆ" ಮತ್ತು "ಕೂಡುವುದಕ್ಕೂ" ಮಧ್ಯದಲ್ಲಿಯ ವ್ಯತ್ಯಾಸ ಹೇಳಿರಿ.**
   a. ಐಕ್ಯತೆಯಿಲ್ಲದೆ ಕೂಡುವುದಕ್ಕೆ ಒಂದು ಉದಾಹರಣೆ ಕೊಡಿರಿ.
      ಅನೇಕ ಸಭಾಪಂಗಡಗಳ ಕೂಟದಲ್ಲಿ ಕೂಡುವಿಕೆ ಇರುತ್ತದೆ, ಆದರೆ ಐಕ್ಯತೆಯಿರುವುದಿಲ್ಲ.
   b. ಇನ್ನೂ ಹೀಗೆ ಉದಾಹರಿಸಿರಿ.
      ಸಭಾಪಂಗಡಗಳ A, B, C, D ಐಕ್ಯತಾ ಭಕ್ತಿ ಸಂಜೀವನದಲ್ಲಿ ಪ್ರವೇಶಿಸುವವು. ಅಲ್ಲಿ ಐದನೂರು ಜನ ಮಾರ್ಪಾಟು ಹೊಂದುವರು.
      ಭಕ್ತಿ ಸಂಜೀವನ ಮುಕ್ತಾಯವಾದ ಮೇಲೆ ಅದರಲ್ಲಿ ನಾಲ್ಕನೂರು ಜನರು ಸಮನಾಗಿ ವಿಭಾಗವಾಗುವರು. ಈ ಐಕ್ಯತೆಯ ಕೂಟವು ಈಗಾಗಲೇ ವಿಭಾಗವಾಗಿದ್ದ ಸಭೆಗಳನ್ನು ಬಲಪಡಿಸಲಿಲ್ಲವೇ? ಆದುದರಿಂದ ಒಕ್ಕೂಟಗಳು ಕ್ರೈಸ್ತ ಐಕ್ಯತೆಯನ್ನು ತರುವವೋ?
   c. ಈ ಐದುನೂರು ಮಾರ್ಪಟ್ಟವರಲ್ಲಿ ಒಂದು ನೂರು ಜನರು ಕೂಟದಲ್ಲಿ ಒಳಗೊಂಡಿದ್ದ ಸಭೆಗಳ ಮಧ್ಯದಲ್ಲಿ ವಿಭಾಗವಾಗುವುದನ್ನು ನಿರಾಕರಿಸಿದರು. ಅವರು ಏನಾಗಿದ್ದರು?

**ಐಕ್ಯತೆ ಯಾಕೆ ಇರಬೇಕು**

1. **ಯೇಸುವು ಯಾವುದಕ್ಕಾಗಿ ಪ್ರಾರ್ಥಿಸಿದನು (ಯೋಹಾನ 17:20-22)?**
2. **ಏನಾಗಿರಬೇಕೆಂದು ಪೌಲನು ಕೊರಿಂಥದವರನ್ನು ಬೇಡಿಕೊಂಡನು (1 ಕೊರಿಂಥ 1:10)?**
3. **ಐಕ್ಯತೆಯನ್ನು ಹೊಂದಲು ಮತ್ತು ಮುಂದುವರಿಸಿಕೊಂಡು ಹೋಗಲು ಎಲ್ಲರೂ ಹೇಗೆ ವರ್ತಿಸಬೇಕು (ಎಫೆಸ 4:1-3)?**
4. **ಜಗತ್ತಿನ ಧಾರ್ಮಿಕ ವಿಭಜನೆಗಳು ಅವಿಶ್ವಾಸವನ್ನು ಹೇಗೆ ಹುಟ್ಟಿಸುತ್ತದೆ (ಯೋಹಾನ 17:21)?**
5. **ಧಾರ್ಮಿಕ ಜಗತ್ತಿನ ಐಕ್ಯತೆಯು ಅಪಾರವಾದ ವೆಚ್ಚವನ್ನು ಹೇಗೆ ತೆಗೆದುಹಾಕುತ್ತದೆ?**
6. **ವಿಭಜನೆಗಳನ್ನು ಪೌಲನು ಹೇಗೆ ಖಂಡಿಸಿದನು (1 ಕೊರಿಂಥ 1:13; 3:3, 4; ರೋಮಾಪುರ 16:17, 18)?**

**ಐಕ್ಯತೆಯ ತಳಹದಿ**

| **ಈ ಅನಾವಶ್ಯಕತೆಗಳನ್ನು ತೆಗೆದು ಹಾಕಿರಿ:** | **ಈ ಅವಶ್ಯಕತೆಗಳನ್ನು ಉಳಿಸಿಕೊಳ್ಳಿರಿ:** |
|---|---|
| 1. ಧರ್ಮದ ಸಾರಾಂಶಗಳು - ಇಂಥಾ<br>a. ಶಿಸ್ತುಪಾಲನೆಗಳು<br>b. ವಿಶ್ವಾಸದ ಅರಿಕೆಗಳು<br>c. ಕೈಪಿಡಿಗಳು<br>d. ಮಾರ್ಗದರ್ಶಿಗಳು | 1. ಬೈಬಲ್ |
| 2. ಸಭಾ ಪಂಗಡಗಳ ಹೆಸರುಗಳು | 2. ಬೈಬಲ್ ಹೆಸರುಗಳು |
| 3. ಸಭಾ ಪಂಗಡಗಳ ಚರ್ಚುಗಳು | 3. ಬೈಬಲ್ ಸಭೆ |
| 4. ಸಭಾ ಪಂಗಡಗಳ ಬಾಪ್ತಿಸ್ಮ - ವಿಧಾನಗಳು, ರಚನೆ ಮತ್ತು ವಿಷಯಗಳು | 4. ಹೊಸ ಒಡಂಬಡಿಕೆಯ ಬಾಪ್ತಿಸ್ಮ - ರೀತಿ, ಮಾದರಿ ಮತ್ತು ಒಳಪಟ್ಟವರು |

**ನಿರ್ಣಯಗಳು**

1. **ಎಲ್ಲಾ ವಿಶ್ವಾಸದ ಅರಿಕೆಗಳೂ ಕೈಪಿಡಿಗಳೂ ಅನಾವಶ್ಯಕವಾದವುಗಳೆಂದು ಒಪ್ಪಿಕೊಳ್ಳುವುದು ಹೇಗೆಂದು ತೋರಿಸಿರಿ.**
2. **ಬೈಬಲ್ ಖಂಡಿತವಾಗಿ ಅವಶ್ಯಕವಾದದ್ದೆಂಬುದನ್ನು ತೋರಿಸಿರಿ (2 ತಿಮೊಥೆ 3:16, 17).**
3. **ಸಭಾಪಂಗಡಗಳ ಹೆಸರುಗಳು ಹೇಗೆ ಅವಶ್ಯಕವಾದವುಗಳು ಎಂಬುದನ್ನು ಪ್ರತ್ಯಕ್ಷ ಪಡಿಸಿರಿ.**
4. **ಬೈಬಲಿನಲ್ಲಿ ಕಂಡು ಬರುವ ಹೆಸರುಗಳ ಮೇಲೆ ಎಲ್ಲರೂ ಹೇಗೆ ಐಕ್ಯತೆಯಲ್ಲಿ ಬರಬಹುದೆಂಬುದನ್ನು ತೋರಿಸಿರಿ.**
5. **ಸಭಾಪಂಗಡಗಳಿಂದ ಆಚರಿಸಲ್ಪಟ್ಟ ಬಾಪ್ತಿಸ್ಮವು ಹೇಗೆ ಬೆಲೆಯಿಲ್ಲದ್ದು ಎಂಬುದನ್ನು ಉದಾಹರಿಸಿರಿ.**
6. **ಪ್ರತ್ಯೇಕವಾಗಿ ಸಭಾಪಂಗಡದ ಯಾವುದೇ ಸಂಗತಿಯ ಮೇಲೆ ಅವಲಂಭಿಸಿದ ಕ್ರೈಸ್ತ ಐಕ್ಯತೆಯ ಅಸಾಧ್ಯತೆಯನ್ನು ಪ್ರತ್ಯಕ್ಷ ಪಡಿಸಿರಿ.**
7. **ಕ್ರಿಸ್ತನು ಪ್ರಾರ್ಥಿಸಿದ ಐಕ್ಯತೆಯನ್ನು ಸಾಧಿಸುವದಕ್ಕಾಗಿ ಯಾವುದು ತೆಗೆದು ಹಾಕಲ್ಪಡಬೇಕು? ಯಾವುದು ಉಳಿಸಿಕೊಳ್ಳಲ್ಪಡಬೇಕು? ಮೇಲಿನ ಪಟ್ಟಿಯನ್ನು ಅಧ್ಯಯನ ಮಾಡಿರಿ.**

**ಪೌಲನ ಪ್ರದರ್ಶನ – ಕ್ರಿಸ್ತನ ವೇದಿಕೆ (ಎಫೆಸ 4:4-6)**

1. **ಆರಾಧನೆಯ ಬಗ್ಗೆ, ಏನು ಇರತಕ್ಕದ್ದು?............................................ ಒಬ್ಬನೇ ದೇವರು**
2. **ಅಧಿಕಾರದ ಬಗ್ಗೆ, ಯಾವ ಮೂಲವಿರಬೇಕು?..................................... ಒಬ್ಬನೇ ಕರ್ತನು**
3. **ಸಂಘಟನೆಯ ಬಗ್ಗೆ, ಏನು ಇರಬೇಕು? ................................................ ಒಂದೇ ದೇಹ**
4. **ಜೀವದ ಬಗ್ಗೆ, ಯಾವ ಮೂಲವಿರಬೇಕು?............................................. ಒಬ್ಬನೇ ಆತ್ಮ**
5. **ಬೋಧನೆಯ ಬಗ್ಗೆ, ಯಾವ ತತ್ವವಿರಬೇಕು ..........................................ಒಂದೇ ವಿಶ್ವಾಸ**
6. **ಆಚರಣೆಯ ಬಗ್ಗೆ, ಏನು ಇರಬೇಕು?............................................. ಒಂದೇ ಬಾಪ್ತಿಸ್ಮ**
7. **ಉದ್ದೇಶದ ಬಗ್ಗೆ, ಏನು ಇರಬೇಕು?................................................ ಒಂದೇ ನಿರೀಕ್ಷೆ**

© 2009 Truth for Today